ದಿನಾಂಕ 03-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ಶ್ರೀ ವಿ. ಎಸ್ ವಕೀಲರವರಿಂದಃ**

ನನಗೆ ಕನ್ನಡ ಬರುವುದಿಲ್ಲ. ಅಸ್ತಿಯನ್ನು ವಿಭಾಗ ಮಾಡಲು ಪ್ರತಿವಾದಿಯವರಿಗೆ ಕೇಳಿಕೊಂಡಿದ್ದೆ ಅವರು ಒಪ್ಪಲಿಲ್ಲ ಅದಕ್ಕೆ ವ್ಯಾಜ್ಯವನ್ನು ಮಾಡಿರುತ್ತೇನೆ. ನನ್ನ ಚಿಕ್ಕಪ್ಪನ ಮಗ ದೇವಪ್ಪನವರಲ್ಲಿ ಪಾಲು ಮಾಡಲು ಕೇಳಿದ್ದೆ, ಆದರೆ ಅವರು ಪಾಲು ಮಾಡಲಿಲ್ಲ. ನನ್ನ ಅಜ್ಜ ರಾಮ ಕಾಮತ್ ರವರ ಆಸ್ತಿಯಲ್ಲಿ ನಾಲ್ಕು ಪಾಲು ಆಗಬೇಕು ಎಂದು ನನ್ನ ವ್ಯಾಜ್ಯ. ರಾಮ ಕಾಮತ್ ರವರಿಗೆ ಚಾಲಗೇಣಿಯಿಂದ ಬಂದಂತಹ ಆಸ್ತಿ. ರಾಮ ಕಾಮತ್ ರವರು ಸುಬ್ರಾಯ ಭಟ್ ರವರಿಂದ ಚಾಲಗೇಣಿ ಪಡೆದುಕೊಂಡಿದ್ದರು. ಗೇಣಿಗೆ ಪಡೆದುಕೊಂಡದ್ದು ಯಾವ ವರುಷ ಎಂದು ನನಗೆ ಗೊತ್ತಿಲ್ಲ ಯಾಕೆಂದರೆ ಆಗ ನಾನು ತುಂಬಾ ಚಿಕ್ಕವನಾಗಿದ್ದೆ. ರಾಮ ಕಾಮತ್ ರವರು ಸುಬ್ರಾಯ ಭಟ್ ರವರಲ್ಲಿ ಗೇಣಿ ಮಾಡುತ್ತಿದ್ದುದನ್ನು ನಾನು ನೋಡಿದ್ದೆ ಮತ್ತು ನಾನು ಗೇಣಿ ನೀಡಿದ್ದೇನೆ. 12 ಮುಡಿ ಅಕ್ಕಿ ಗೇಣಿ ಕೊಡುತ್ತಿದ್ದೆವು. ನಾನು ಸದ್ರಿ ಗೇಣಿ ವರುಷದಲ್ಲಿ ಒಂದು ಸಲ ನೀಡಿದ್ದೆ. ಡಿಕ್ಲರೇಷನ್ ಕೊಡುವವರೆಗೆ ನಾನು ಗೇಣಿ ನೀಡಿದ್ದೆ. ಡಿಕ್ಲರೇಷನ್ ಫಾರಂ ನಂಬ್ರ 7 ನನ್ನ ಚಿಕ್ಕಪ್ಪ ದೇವಣ್ಣ ಕಾಮತ್ ರವರು ಸಲ್ಲಿಸಿದ್ದರು. ಎರಡು ಗೇಣಿ ಚೀಟಿ ಇರುತ್ತದೆ. ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಗೇಣಿ ಚೀಟಿ ಧಣಿಯವರ ಬಳಿ ಇರುತ್ತದೆ. ಧಣಿಯವರು ತೀರಿಕೊಂಡಿದ್ದಾರೆ ಅವರ ಮಕ್ಕಳು ಎಲ್ಲಿ ಇದ್ದಾರೆ ಎಂದು ನನಗೆ ತಿಳಿದಿಲ್ಲ. ಈಗ ಅವರ ವಾರಸುದಾರರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಒಟ್ಟು ಗೇಣಿ ಜಮೀನು 6 ಎಕರೆ ಸುಬ್ರಾಯ ಭಟ್ ರವರಿಂದ ಪಡೆದುಕೊಂಡಿರುತ್ತೇವೆ. ಸದ್ರಿ ಆಸ್ತಿಯಲ್ಲಿ 2 ಎಕರೆ ಗುಡ್ಡೆ ಇರುತ್ತದೆ. ಉಳಿದ ನಾಲ್ಕು ಎಕರೆಯಲ್ಲಿ ತೋಟ ಇರುತ್ತದೆ. ಡಿಕ್ಲರೇಷನ್ 1978 ನೇ ಇಸವಿಯಲ್ಲಿ ಆಗಿರುತ್ತದೆ.

ದೇವಣ್ಣ ಕಾಮತ್ ರವರಿಗೆ ಡಿಕ್ಲರೇಷನ್ ಆಗಿ 45 ವರ್ಷ ಆದ ನಂತರ ಈಗ ಯಾಕೆ ಪಾಲು ಕೇಳುತ್ತಾ ಇದ್ದೀರಿ ಎಂದರೆ ಎರಡು ಬಾರಿ ಕೇಳಿಕೊಂಡಿದ್ದೆ ಅವರು ಕೊಡಲಿಲ್ಲ ಅದಕ್ಕಾಗಿ ಈ ಪ್ರಕರಣ ದಾಖಲಿಸಿರುತ್ತೇನೆ. ಈ ವ್ಯಾಜ್ಯ ಸಲ್ಲಿಸುವ 2 ವರುಷದ ಹಿಂದೆ ಪಾಲನ್ನು ಕೇಳಿಕೊಂಡಿದ್ದು ಆದರೆ ಅವರು ಏನು ಉತ್ತರ ನೀಡಲಿಲ್ಲ. ಮೊದಲು ಬಾಯಿ ಮಾತಿನಲ್ಲಿ ಕೇಳಿದೆ, ನಂತರ ಪಂಚಾಯಿತಿಯ ಮೂಲಕ ಕೇಳಿದ್ದೆ, ಪಂಚಾಯಿತಿಯಲ್ಲಿ ಗೋಪಾಲ ವಾಗ್ಲೆ , ಕುಪ್ಪಣ್ಣ ವಾಗ್ಲೆ , ರತ್ನಾಕರ, ಸದಾನಂದ, ನನ್ನ ಅಣ್ಣನ ಹೆಂಡತಿ ಸರಸ್ವತಿ, ರಾಮಕೃಷ್ಣ, ದೇವಪ್ಪ, ಉಪೇಂದ್ರ ಹಾಗೂ ನಾನು ಕೂಡ ಇದ್ದೆ. ಪಂಚಾಯಿತಿಯಲ್ಲಿ ನಾವು ಕುಳಿತುಕೊಂಡು ಮಾತನಾಡಿರುತ್ತೇವೆ. ರತ್ನಾಕರ, ಸದಾನಂದ ರವರು ಗ್ರಾಮ ಪಂಚಾಯತಿ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ಸುಬ್ಬಣ್ಣ ಕಾಮತ್ ರವರು ಗೇಣಿಗೆ ಪಡೆದುಕೊಂಡ ಆಸ್ತಿಯಲ್ಲಿ ಹಾಡಿಯಲ್ಲಿ ಪ್ರತಿವಾದಿ ದೇವಪ್ಪನವರಿಗೆ ಒಂದುವರೆ ಎಕರೆ ಹಾಡಿಯ ಜಾಗ ನೀಡುವುದು, ಆ ಹಾಡಿಯಲ್ಲಿ ಉಳಿದ ಅಂಶಗಳು ಸುಬ್ಬಣ್ಣ ಕಾಮತ್ ರವರ ವಾರಸುದಾರರಿಗೆ ನೀಡುವಂತೆ ತೀರ್ಮಾನವಾಗಿತ್ತು.

**ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

1 ನೇ ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.